ನಡೆಯುತ್ತವೆ. ಗರ್ಭ ಧರಿಸಿದ ಹೆಣ್ಣು ಎರಡು ತಿಂಗಳೊಳಗೆ ಗರಿಷ್ಠ ಮೂರ್ನಾಲ್ಕು ಮರಿಗಳಿಗೆ ಜನ್ಮ ನೀಡುತ್ತದೆ. ಹುಟ್ಟು ಕುರುಡಾಗಿ ಜನಿಸಿದ ಮರಿಗಳಿಗೆ ಈಜುಕೂಡ ಬರುವುದಿಲ್ಲ. ತಂದೆ ಅಪರೂಪಕ್ಕೊಮ್ಮೆ ಅತಿಥಿಯಂತೆ ಮರಿಗಳ ಹತ್ತಿರ ಬರುತ್ತದೆ. ತಾಯಿಯೇ ಮರಿಗಳನ್ನು ಸುರಕ್ಷಿತ ಜಾಗದಲ್ಲಿಟ್ಟು ಲಾಲನೆ ಪಾಲನೆ ಮಾಡುತ್ತದೆ.

ನೀರು ನಾಯಿ ಕೂಳುಬಾಕ ಪ್ರಾಣಿ. ಅಧಿಕ ಜೀರ್ಣಶಕ್ತಿ ಇರುವುದರಿಂದ ಸದಾ ತಿನ್ನುತ್ತಲೇ ಇರುತ್ತದೆ. ಮುರಗೋಡು ಮೀನು (cat fish) ಎಂದರೆ ಇವಕ್ಕೆ ಮೃಷ್ಟಾನ್ನ. ಮೀನು, ಪಕ್ಷಿ, ಪಕ್ಷಿಗಳ ಮೊಟ್ಟೆ, ಏಡಿ, ಕಪ್ಪೆ, ಆಮೆ, ಹಾವು, ಕೀಟಗಳನ್ನು ತಿನ್ನಬಲ್ಲದು. ಜಲಸಸ್ಯಗಳನ್ನು, ಕೊಳೆತ ಜಲಚರಗಳನ್ನು ತಿನ್ನುವ ಈ ಪ್ರಾಣಿ ತನ್ನ ಆವಾಸದ ಜಲ ಪರಿಸರವನ್ನು ಸದಾ ಸ್ವಚ್ಛವಾಗಿ, ಶುದ್ಧವಾಗಿಟ್ಟುಕೊಳ್ಳುತ್ತದೆ.

ನೀರು ನಾಯಿಗಳ ಸಂತತಿ ಯೂರೋಪ್, ಏಷ್ಯಾ ಹಾಗೂ ಆಫ್ರಿಕಾಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಪ್ರಾಚೀನ ನಾವಿಕರು ಸಮುದ್ರದಲ್ಲಿ ಕಳೆದುಹೋದ ವಸ್ತುಗಳನ್ನು ಹಿಂಪಡೆಯಲು ಹಾಗೂ ದೋಣಿಗಳ ನಡುವೆ ಸಂದೇಶ ರವಾನಿಸಲು ಈ ಪ್ರಾಣಿಗಳನ್ನು ಬಳಸುತ್ತಿದ್ದರಂತೆ. ಸ್ಪೇನ್, ಪೋರ್ಚುಗಲ್, ಪಾಕಿಸ್ತಾನ್ ಹಾಗೂ ಬಾಂಗ್ಲಾದೇಶದವರು ನೀರು ನಾಯಿಗಳನ್ನು ಮೀನುಗಾರಿಕೆ ಹಡಗುಗಳಲ್ಲಿ ಬಳಸುತ್ತಿದ್ದರು. ಬಿಲ್ಲು ಬಾಣಗಳಿಂದ ಹೊಡೆದ ಮೀನು ಮತ್ತು ಬಾತುಕೋಳಿಗಳನ್ನು ನೀರು ನಾಯಿಗಳು ತಂದುಕೊಡುತ್ತಿದ್ದವು. ಇಂದಿಗೂ ಅತ್ಯಧಿಕ ಸಂಖ್ಯೆಯ ನೀರು ನಾಯಿಗಳು ನಾರ್ವೆ, ಸ್ಪೇನ್, ಬ್ರಿಟನ್, ಐರ್ಲೆಂಡ್, ಇಟಲಿ, ಮ್ಯಾನ್ಮಾರ್, ಮಂಗೋಲಿಯ ಹಾಗೂ ಭಾರತದಲ್ಲಿ ಕಂಡುಬರುತ್ತವೆ.

ಕರ್ನಾಟಕದಲ್ಲಿಯೂ ಕೆ.ಆರ್.ಎಸ್. ಡ್ಯಾಂ ಹಿನ್ನೀರು, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮ, ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ, ಲಕ್ಕೊಳ್ಳಿಯ ಭದ್ರಾ ಜಲಾಶಯದ ಹಿನ್ನೀರು, ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಶೆಟ್ಟಿಕೆರೆ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೂಡ್ಲುಕಟ್ಟೆ ಹಿನ್ನೀರು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಶಿಲದ ಕಪಿಲಾನದಿ ನೀರು ನಾಯಿಗಳ ಆವಾಸವಾಗಿವೆ.

ಕೊಪ್ಪಳ ಜಿಲ್ಲೆಯ ಮುದ್ಲಾಪುರ ಗ್ರಾಮದಿಂದ ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಪಟ್ಟಣದವರೆಗೆ 34 ಕಿ.ಮೀ. ಉದ್ದಕ್ಕೂ ತುಂಗಭದ್ರಾ ಹರಿಯುತ್ತದೆ. ಅದರ ಎರಡೂ ದಂಡೆಗಳಲ್ಲಿ ಅಪಾರ ಸಂಖ್ಯೆಯ ನೀರು ನಾಯಿಗಳ ಆವಾಸಸ್ಥಾನವಿದೆ. 2015ರ ಏಪ್ರಿಲ್ ತಿಂಗಳಿನಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆ ಆ 34 ಕಿ.ಮೀ. ವಿಸ್ತಾರದ ಪ್ರದೇಶವನ್ನು ‘ನೀರು ನಾಯಿಗಳ ಸಂರಕ್ಷಿತ ಪ್ರದೇಶ’ವೆಂದು ಘೋಷಿಸಿದೆ. ಸ್ಥಳೀಯ ವನ್ಯಜೀವಿ ಹಾಗೂ ಪರಿಸರಪ್ರೇಮಿಗಳ ಸತತ ಹೋರಾಟ ಮತ್ತು ಪ್ರಯತ್ನದ ಫಲವಾಗಿ ರಾಜ್ಯದ ಏಕೈಕ ನೀರು ನಾಯಿಗಳ ಸಂರಕ್ಷಿತ ಪ್ರದೇಶ ವಿಜಯನಗರ ಜಿಲ್ಲೆಯಲ್ಲಿ ತಲೆ ಎತ್ತಿ ನಿಂತಿದ್ದು ಹೆಮ್ಮೆಯ ಸಂಗತಿ.



ಮಾನವ–ವನ್ಯಜೀವಿಗಳ ಸಂಘರ್ಷ ನೀರು ನಾಯಿಗಳನ್ನೂ ಬಿಟ್ಟಿಲ್ಲ. ನುಣುಪಾದ ತುಪ್ಪಳದ ವ್ಯಾಮೋಹದಿಂದ, ಮೀನುಗಳ ಸಂತತಿ ಕಡಿಮೆಯಾಗುತ್ತದೆ ಎಂಬ ದುರಾಸೆಯಿಂದ ನೀರು ನಾಯಿಗಳನ್ನು ಕೊಲ್ಲಲಾಗುತ್ತಿದೆ. ನಗರಗಳ ತ್ಯಾಜ್ಯ, ರಾಸಾಯನಿಕಗಳಿಂದ ನದಿಗಳ ನೀರು ಕಲುಷಿತಗೊಳ್ಳುತ್ತಿದ್ದು, ನೀರು ನಾಯಿಗಳಿಗೆ ಕಾಯಿಲೆ ಬಂದು ಸಾಯುತ್ತಿವೆ. ಪುಟ್ಟ ಪುಟ್ಟ ಚೆಕ್‌ಡ್ಯಾಂಗಳ ನಿರ್ಮಾಣ, ನದಿಗಳ ಹರಿವು ನಿಲ್ಲಿಸುತ್ತಿದೆ. ನೀರು ನಾಯಿಗಳ ಆವಾಸ ನಿರಂತರವಾಗಿ ನಾಶವಾಗುತ್ತಿದೆ. ಇವುಗಳ ಸಂತತಿ ಉಳಿವಿಗೆಂದೇ, ಪ್ರತಿ ವರ್ಷ ಮೇ ತಿಂಗಳ ಕೊನೇ ಬುಧವಾರದಂದು ‘ಜಾಗತಿಕ ನೀರು ನಾಯಿಗಳ ದಿನ’ವನ್ನು ಆಚರಿಸಲಾಗುತ್ತಿದೆ.

ನೀರು ನಾಯಿಗಳು ಶುದ್ಧ ನೀರಿನ ರಾಯಭಾರಿಗಳು. ಅವುಗಳನ್ನು ರಕ್ಷಿಸಿದರೆ ಇಡೀ ಜೀವಜಲವನ್ನೇ ಸಂರಕ್ಷಿಸಿದಂತೆ.

ಪ್ರತಿಕ್ರಿಯಿಸಿ: feedback@sudha.co.in

